# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 610/2024 |
| ಪಿ.ಡಬ್ಲೂ | : 04 |
| ಸಾಕ್ಷಿಯ ಹೆಸರು | : ಗೋವಿಂದ ತಮ್ಮಣ್ಣ ಗುಂಜೀಕರ |
| ವಯಸ್ಸು | : 62 ವರ್ಷ |
| ಉದ್ಯೋಗ | : ನಿವೃತ್ತ ಅಬಕಾರಿ ಉಪನಿರೀಕ್ಷಕರು. |
| ವಾಸ ಸ್ಥಳ | : ಹಳಿಯಾಳ |

ದಿನಾಂಕಃ 21/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು 2017 ರಿಂದ 2024 ವರೆಗೆ ಅಬಕಾರಿ ಉಪನಿರೀಕ್ಷಕನಾಗಿ ಎಂದು ನವಲಗುಂದ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-05-2021 ರಂದು ನಾನು, ಚಾಸಾ-3 ರಿಂದ 4 ಚಾಸಾ-5 ರವರು ಗುಮ್ಮಗೋಳ ರಸ್ತೆಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಬೆ.05.00 ಗಂಟೆಗೆ ನನಗೆ ಬಂದ ಬಾತ್ಮಿ ಎಂದರೆ ಶಿರೂರು ಗ್ರಾಮದ ಇನಾಮಹೊಂಗಲ ರಸ್ತೆಯಲ್ಲಿ ಆರೋಪಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಗೊತ್ತಾಗಿದ್ದು ಆಗ ಗುಮ್ಮಗೋಳ ಗ್ರಾಮದ ಬಸ್ ನಿಲ್ದಾಣದಲ್ಲಿದ್ದ ಚಾಸಾ-1 ಮತ್ತು 2 ರವರನ್ನು ಪಂಚರೆಂದು ನೇಮಿಸಿಕೊಂಡು ನಾವೆಲ್ಲ ಸೇರಿ ಬೆ.05.15 ಗಂಟೆಗೆ ಅಲ್ಲಿಂದ ಹೊರಟು ಬೆ.06.15 ಗಂಟೆಗೆ ಘಟನಾ ಸ್ಥಳ ತಲುಪಿ ವೀಕ್ಷಣೆ ಮಾಡುತ್ತಿದ್ದಾಗ ಬೆ.07.05 ಗಂಟೆಗೆ ಆರೋಪಿ ತನ್ನ ಮೋಟಾರ ಸೈಕಲ್ ನಲ್ಲಿ KA-25/HC-5563 ನೇದ್ದನ್ನು ನಿಲ್ಲಿಸಿ ಪರಿಶೀಲನೆ ಮಾಡುವಾಗ ಸದರಿಯವನು ನಮ್ಮನ್ನು ನೋಡಿ ಮೋಟಾರ ಸೈಕಲ್ ನ್ನು ಅಲ್ಲಿಯೇ ಬಿಟ್ಟು

ಓಡಿ ಹೋಗಿರುತ್ತಾನೆ. ನಂತರ ಸದರಿ ಮೋಟಾರ ಸೈಕಲ್ ನ್ನು ಪರಿಶೀಲನೆ ಮಾಡಿದಾಗ 90 ML ನ 192 ಓರಿಜಿನಲ್ ಚಾಯಿಸ್ ವಿಸ್ಕಿ ಪೌಚಗಳು ಒಂದು ಗೊಬ್ಬರ ಚೀಲದಲ್ಲಿ ಇಡಲಾಗಿತ್ತು. ನಂತರ ಸದರಿ ಪೌಚ್ ಗಳಲ್ಲಿ 21 ಪೌಚ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತಿಪಡಿಸಿಕೊಂಡು ಪಂಚನಾಮೆ ಬೆ.07.15 ರಿಂದ 08.15 ವರೆಗೆ ನಾನು ಪೂರೈಸಿರುತ್ತೇನೆ. ನಂತರ ಕಚೇರಿಗೆ ತೆರಳಿ ಆರೋಪಿಯ ವಿರುದ್ಧ ಠಾಣಾ ಗುನ್ನಾ ಸಂಃ 27/2020-21 ನ್ನು ದಾಖಲಿಸಿ ಪ್ರ. ವ. ವ. ಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-8 ರವರಿಗೆ ವಹಿಸಿರುತ್ತೇನೆ.

3. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದ**

ಗುಮ್ಮಗೋಳ ರಸ್ತೆಯಲ್ಲಿ ಗಸ್ತು ಕರ್ತವ್ಯದ ಸ್ಥಳದಿಂದ ಘಟನಾ ಸ್ಥಳ 06 ಕಿ. ಮೀ. ಅಂತರದಲ್ಲಿದೆ. ಸದರಿ ಅಂತರ ತಲುಪಲು 20 ನಿಮಿಷ ಅವಧಿ ಬೇಕಾಗುತ್ತದೆ ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ನಾನು ನಮ್ಮ ವಾಹನದಲ್ಲಿ ಕರೆದುಕೊಂಡು ಬಂದಿರುತ್ತೇನೆ. ನಮ್ಮ ವಾಹನವನ್ನು 100 ಮೀಟರ ಅಂತರದಲ್ಲಿ ನಿಲ್ಲಿಸಿರುತ್ತೇವೆ. ವಾಹನವನ್ನು ಯಾವ ಬದಿಗೆ ನಿಲ್ಲಿಸಿ ವಿಕ್ಷಣೆ ಮಾಡಿರುತ್ತೇವೆ ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಅಂದಾಜು 5-10 ನಿಮಿಷಗಳ ಕಾಲ ವಿಕ್ಷಣೆ ಮಾಡಿರುತ್ತೆವೆ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿದ್ದು ಅವರ ಸಹಿಯನ್ನು ತೆಗೆದುಕೊಂಡಿರುವದಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಸಾಕಷ್ಟು ಮನೆಗಳಿರುತ್ತವೆ ಎಂದರೆ ಸರಿ. ಜಪ್ತಿ ಮಾಡಿದ ಎಲ್ಲಾ ಮುದ್ದೆ ಮಾಲನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಿರುವದಿಲ್ಲ. ಜಪ್ತಿ ಮಾಡಿದ ಮುದ್ದೆ ಮಾಲಿನ ವಿವರಗಳನ್ನು ಆರೋಪಿತರಿಗೆ ನೀಡಿರುವುದಿಲ್ಲ. ಮುದ್ದೆ ಮಾಲಿನಂತಹ ವಸ್ತುಗಳು ಸಾಮಾನ್ಯವಾಗಿ ಬೇರೆ ಕಡೆಗೆ ಸಿಗುತ್ತವೆ ಎಂದರೆ ಸಿಗಬಹುದು. ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದಿಲ್ಲಾ. ಸದರಿ ಭಾವಚಿತ್ರವನ್ನು ತೆಗೆಯಲು ಯಾವದೇ ತೊಂದರೆ ಇರಲಿಲ್ಲಾ. ಯಾವದೇ ರೀತಿ ದಾಳಿ ಮಾಡಿಲ್ಲಾ, ಪಂಚನಾಮೆ ಮಾಡಿಲ್ಲಾ ಹಾಗೂ ಮುದ್ದೆ ಮಾಲುಗಳು ಈ ಪ್ರಕರಣಕ್ಕೆ ಸಂಬಂಧಿಸಿಲ್ಲಾ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**